# ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ

ನವನಗರ ಹುಬ್ಬಳ್ಳಿ-580 025
ಫೋನ್ 0836-2222392, ಫ್ಯಾಕ್ಸ್-0836-2223392

ಸಂಖ್ಯೆ: ಕರಾಕಾವಿ/2018-19/-1829 ದಿನಾಂಕ: 22.10.2018

ಮಾನ್ಯರೆ,

ವಿಷಯ : ಆರನೇಯ ಕನ್ನಡ ಕಲ್ಪಿತ ನ್ಯಾಯಾಲಯ ಸ್ಪರ್ಧೆ ದಿನಾಂಕ: 23 ಮತ್ತು 24 ನವೆಂಬರ್ 2018.

ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯವು ಆರನೇಯ ಕನ್ನಡ ಕಲ್ಪಿತ ನ್ಯಾಯಾಲಯ ಸ್ಪರ್ಧೆಯನ್ನು ದಿನಾಂಕ: 23 ಮತ್ತು 24 ನವೆಂಬರ್ 2018 ರಂದು ಏರ್ಪಡಿಸುತ್ತಿದೆ ಎಂದು ತಿಳಿಸಲು ಸಂತೋಷವೆನಿಸುತ್ತಿದೆ. ಈ ಸ್ಪರ್ಧೆಯ ಯಶಸ್ಸಿಗೆ ತಮ್ಮೆಲ್ಲರ ಸಹಕಾರ ಅತ್ಯಮೂಲ್ಯ. ತಮ್ಮ ಮಹಾವಿದ್ಯಾಲಯದ ತಂಡವನ್ನು ಈ ಸ್ಪಧೆಯಲ್ಲಿ ಭಾಗವಹಿಸಲು ಆಮಂತ್ರಿಸುತ್ತಿದ್ದೇವೆ. ಕಲ್ಪಿತ ನ್ಯಾಯಾಲಯ ಸ್ಪರ್ಧೆಯ ಸಮಸ್ಯೆಯನ್ನು ಮತ್ತು ಇತರೆ ನಿಯಮಗಳನ್ನು ಈ ಪತ್ರದೊಂದಿಗೆ ಲಗತ್ತಿಸಿದೆ.

ಹೆಚ್ಚಿನ ಮಾಹಿತಿಗಾಗಿ ತಾವು ಈ ಕೆಳಗಿನವರನ್ನು ಸಂಪರ್ಕಿಸಬಹುದು.

1. ಪ್ರೊ. ಸಿ.ಎಸ್.ಪಾಟೀಲ 9845431663
2. ಡಾ. ಜಿ.ಬಿ.ಪಾಟೀಲ 9448317129
3. ಡಾ. ರಂಗಸ್ವಾಮಿ ಡಿ. 9964286178
4. ಶ್ರೀ ಸುನೀಲ ಬಗಾಡೆ 8105157284

**ಸಂಪರ್ಕಿಸಲು ವಿಳಾಸ:**

ಸಂಯೋಜಕರು, ಆರನೇಯ ಕನ್ನಡ ಕಲ್ಪಿತ ನ್ಯಾಯಾಲಯ ಸ್ಪರ್ಧೆ
ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ ನವನಗರ,
ಹುಬ್ಬಳ್ಳಿ- 580025

**ಇ-ಮೇಲ್:** kslulawschool@gmail.com

ಧನ್ಯವಾದಗಳೊಂದಿಗೆ,

ತಮ್ಮ ವಿಶ್ವಾಸದ

ಕುಲಸಚಿವರು

ಇವರಿಗೆ:

ಪ್ರಾಂಶುಪಾಲರು, ಕಾನೂನು ಮಹಾವಿದ್ಯಾಲಯಗಳು, ಕ.ರಾ.ಕಾ.ವಿ. ಹುಬ್ಬಳ್ಳಿ.

# ಕಲ್ಪಿತ ನ್ಯಾಯಾಲಯ ಸ್ಪರ್ಧೆಗೆ ಸಂಬಂಧಿಸಿದ ನಿಯಮಗಳು

ಸಾಮಾನ್ಯ ನಿಯಮಗಳು:

1) ಭಾರತದ ವಕೀಲ ಪರಿಷತ್‌ನಿಂದ ಮಾನ್ಯತೆ ಪಡೆದ ಕರ್ನಾಟಕ ರಾಜ್ಯದಲ್ಲಿಯ ಎಲ್ಲ ಕಾನೂನು ಮಹಾವಿದ್ಯಾಲಯಗಳು ಈ ಸ್ಪರ್ಧೆಯಲ್ಲಿ ಭಾಗವಹಿಸಲು ಅರ್ಹತೆಯನ್ನು ಹೊಂದಿರುತ್ತವೆ.

2) ಸ್ಪರ್ಧೆಯಲ್ಲಿ ಭಾಗವಹಿಸಲಿಚ್ಛಿಸುವ ಎಲ್ಲ ಕಾನೂನು ಮಹಾವಿದ್ಯಾಲಯಗಳು, ಇಬ್ಬರು ವಾದ ಮಂಡಿಸುವ ಮತ್ತು ಒಬ್ಬ ಸಂಶೋಧನಾ ವಿದ್ಯಾರ್ಥಿಗಳನ್ನೊಳಗೊಂಡ ಮೂರು ಜನರ ತಂಡವನ್ನು ಸ್ಪರ್ಧೆಗೆ ಕಳುಹಿಸಬೇಕು.

3) ಸ್ಪರ್ಧೆಯು ಪ್ರಾರಂಭವಾಗುವದಕ್ಕಿಂತ ಮುಂಚೆ ವಾದಿ ಮತ್ತು ಪ್ರತಿವಾದಿ ತಂಡಗಳ ಸ್ಪರ್ಧಾ ಪಟ್ಟಿಯನ್ನು ಚೀಟಿ ಎತ್ತುವ ಮೂಲಕ ತಯಾರಿಸಲಾಗುವದು. ನಂತರದ ಹಂತದ ಸ್ಪರ್ಧೆಗೆ 15 ನಿಮಿಷ ಮುಂಚಿತವಾಗಿ ಸ್ಪರ್ಧಾಪಟ್ಟಿಯನ್ನು ತಯಾರಿಸಲಾಗುವದು.

4) ಸಂಘಟಕರು ಸ್ಪರ್ಧೆಯಲ್ಲಿ ಭಾಗವಹಿಸಲಿಚ್ಛಿಸುವ ಯಾವುದೇ ತಂಡಗಳ ಪ್ರವಾಸ ಖರ್ಚನ್ನು ನೀಡುವದಿಲ್ಲ. ಆದರೆ, ಸ್ಪರ್ಧಾ ದಿನಗಳಂದು ಸ್ಪರ್ಧಾಳುಗಳಿಗೆ ಉಚಿತ ಊಟ ಹಾಗೂ ವಸತಿ ಸೌಕರ್ಯಗಳನ್ನು ಕಲ್ಪಿಸಲಾಗುವದು.

5) ಈ ಸ್ಪರ್ಧೆಯನ್ನು ಕನ್ನಡ ಭಾಷೆಯಲ್ಲಿ ನಡೆಸಲಾಗುವದು.

6) ಸ್ಪರ್ಧೆಯಲ್ಲಿ ಭಾಗವಹಿಸಲಿಚ್ಛಿಸುವ ಕಾನೂನು ಮಹಾವಿದ್ಯಾಲಯಗಳು 19.11.2018 ರೊಳಗಾಗಿ ತಮ್ಮ ಭಾಗವಹಿಸುವಿಕೆಯನ್ನು ಖಚಿತಪಡಿಸಬೇಕು.

7) ಕಲ್ಪಿತ ನ್ಯಾಯಾಲಯ ಸ್ಪರ್ಧೆಯ ವಿಷಯ ವಸ್ತುವು ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಹುಬ್ಬಳ್ಳಿಯ ಆಸ್ತಿಯಾಗಿದ್ದು, ಅದನ್ನು ವಿಶ್ವವಿದ್ಯಾಲಯದ ಪೂರ್ವಾನುಮತಿಯಿಲ್ಲದೆ ಯಾರೂ ಉಪಯೋಗಿಸುವಂತಿಲ್ಲ.

8) ಸ್ಪರ್ಧೆಯಲ್ಲಿ ಭಾಗವಹಿಸಲಿಚ್ಛಿಸುವ ಕಾನೂನು ಮಹಾವಿದ್ಯಾಲಯಗಳು 19.11.2018 ರೊಳಗೆ ಲಗತ್ತಿಸಿದ ನೊಂದಣಿ ಅರ್ಜಿಯನ್ನು ಪೂರ್ಣ ಮಾಹಿತಿಯೊಂದಿಗೆ ಸಲ್ಲಿಸಬೇಕು.

**ಕಲ್ಪಿತ ನ್ಯಾಯಾಲಯ ಸ್ಪರ್ಧೆಯ ಕೆಲವು ವಿಶೇಷ ಗುಣಲಕ್ಷಣಗಳು:**

1) ಸ್ಪರ್ಧೆಯಲ್ಲಿ ಭಾಗವಹಿಸಲಿಚ್ಛಿಸುವ ಪ್ರತಿತಂಡಗಳು ವಾದ ಮತ್ತು ಪ್ರತಿವಾದ ಪತ್ರಗಳನ್ನು ಸಂಘಟಕರಿಗೆ ನೊಂದಣಿ ಸಮಯದಲ್ಲಿ ಸಲ್ಲಿಸಬೇಕು.

2) ಪ್ರತಿ ತಂಡಕ್ಕೆ ಒಟ್ಟು 30 ನಿಮಿಷ ಕಾಲಾವಧಿ ಇದ್ದು, ತಂಡದ ಪ್ರತಿ ಸ್ಪರ್ಧಾಳುವಿಗೆ ವಾದ ಮಂಡಿಸಲು ತಲಾ 15 ನಿಮಿಷ ಕಾಲಾವಕಾಶ ನೀಡಲಾಗುವದು.

3) ಒಟ್ಟು 100 ಅಂಕಗಳ ಆಧಾರದ ಮೇಲೆ ಪ್ರತಿ ತಂಡದ ಸಾಧನೆಯನ್ನು ನಿರ್ಧರಿಸಲಾಗುವದು.

4) ಲಿಖಿತ ವಾದ ಪತ್ರಗಳಿಗೆ ಪ್ರತ್ಯೇಕ 50 ಅಂಕಗಳನ್ನು ನಿಗದಿಪಡಿಸಲಾಗಿದೆ.

5) ಸ್ಪರ್ಧೆಯಲ್ಲಿ ಒಟ್ಟು 4 ಹಂತಗಳಿದ್ದು, ಇದರಲ್ಲಿ **ನಿರ್ಗಮಿಸುವ ಸುತ್ತು, ಕ್ವಾರ್ಟರ್ ಫೈನಲ್ಸ್,** ಸೆಮಿ ಫೈನಲ್ಸ್ ಮತ್ತು **ಫೈನಲ್** ಸುತ್ತುಗಳು ಇರುತ್ತವೆ.

6) ಅ. **ನಿರ್ಗಮಿಸುವ ಸುತ್ತು:** ಚೀಟಿ ಎತ್ತಿದ ಪ್ರಕಾರ ಎಲ್ಲಾ ತಂಡಗಳು ಈ ಸುತ್ತಿನಲ್ಲಿ ಭಾಗವಹಿಸುತ್ತವೆ.

ಬ. **ನಿರ್ಗಮಿಸುವ ಸುತ್ತಿನಿಂದ** 50% ವಾದಿ ಕಡೆಯ ಮತ್ತು 50% ಪ್ರತಿವಾದಿ ಕಡೆಯ ತಂಡಗಳು ಕ್ವಾರ್ಟರ್ ಫೈನಲ್ ಸುತ್ತನ್ನು ತಲಪುತ್ತಾರೆ.

ಕ. **ಸೆಮಿ ಫೈನಲ್ ಸುತ್ತು** : ಕ್ವಾರ್ಟರ್ ಫೈನಲ್‌ನಲ್ಲಿ ಭಾಗವಹಿಸಿದ ಸ್ಪರ್ಧಾಳುಗಳಲ್ಲಿ ಒಟ್ಟು 4 ತಂಡಗಳು ಅವರು ಪಡೆದ ಅಂಕಗಳ ಆಧಾರದ ಮೇಲೆ ಸೆಮಿ ಫೈನಲ್ ತಲಪುತ್ತಾರೆ.

ಇ. **ಫೈನಲ್ ಸುತ್ತು:** ಸೆಮಿ ಫೈನಲ್‌ನಲ್ಲಿ ಭಾಗವಹಿಸಿದ ಸ್ಪರ್ಧಾಳುಗಳಲ್ಲಿ ಒಟ್ಟು 2 ತಂಡಗಳು ಅವರು ಪಡೆದ ಅಂಕಗಳ ಆಧಾರದ ಮೇಲೆ ಫೈನಲ್ (ಅಂತಿಮ) ಸುತ್ತನ್ನು ತಲಪುತ್ತಾರೆ.

**ಲಿಖಿತ ವಾದ ಪತ್ರಗಳನ್ನು ಸಲ್ಲಿಸುವುದಕ್ಕೆ ಸಂಬಂಧಿಸಿದ ನಿಯಮಗಳು:**

1. ಲಿಖಿತ ವಾದ ಪತ್ರಗಳನ್ನು ಬಾಂಡ್ ಪೇಪರಿನ ಒಂದು ಬದಿಯಲ್ಲಿ ಟೈಪ್ ಮಾಡಿ, ಪ್ರತಿ ಸಾಲುಗಳ ನಡುವೆ (ಡಬಲ್ ಸ್ಪೇಸ್ ಲೈನಿಂಗ್) ಅಂತರ ಇರುವಂತೆ ಸಲ್ಲಿಸತಕ್ಕದ್ದು.
2. ಸ್ಪರ್ಧೆಯಲ್ಲಿ ಭಾಗವಹಿಸಲಿಚ್ಛಿಸುವ ಕಾನೂನು ಮಹಾವಿದ್ಯಾಲಯಗಳು ಸ್ಪರ್ಧೆಯ ದಿನದಂದು ನೋಂದಣಿಯ ಸಮಯದಲ್ಲಿ ಲಿಖಿತ ವಾದ ಪತ್ರಗಳನ್ನು ಸಲ್ಲಿಸತಕ್ಕದ್ದು.
3. ಬರವಣಿಗೆಯು 15 ಪುಟಗಳನ್ನು ಮೀರಿರಬಾರದು. ಅದರಲ್ಲಿ ಮುಖಪುಟ, ಪರಿವಿಡಿ, ಗ್ರಂಥಋಣ ಪಟ್ಟಿ, ಪ್ರಕರಣಗಳ ಪಟ್ಟಿ, ವಾದಗಳ ಸಾರಾಂಶ ವಿವಾದಾಂಶಗಳು/ಪ್ರಶ್ನೆಗಳು ಹಾಗೂ ಅನುಸೂಚಿಗಳು ಸೇರಿರುವುದಿಲ್ಲ.
4. ಲಿಖಿತ ವಾದ ಪತ್ರಗಳನ್ನು ವ್ಯವಸ್ಥಿತವಾಗಿ ಬೈಂಡ್ (ಜೋಡಣೆ) ಮಾಡಿ ಸಲ್ಲಿಸತಕ್ಕದ್ದು. ಪ್ಲಾಸ್ಟಿಕ್ ಬಳಕೆಯನ್ನು ನಿಷೇಧಿಸಿದೆ.
5. ಒಂದು ಸಲ ಸಲ್ಲಿಸಿದ ಲಿಖಿತ ವಾದ ಪತ್ರಗಳನ್ನು ಹಿಂದಿರುಗಿಸುವುದಿಲ್ಲ.

ಸಮವಸ್ತ್ರ: ಭಾರತದ ವಕೀಲ ಪರಿಷತ್ತು ಸೂಚಿಸಿದ ಸಮವಸ್ತ್ರವನ್ನು ಸ್ಪರ್ಧಾಳುಗಳು ಧರಿಸಬೇಕು.

ಬಹುಮಾನಗಳು:

1. ವಿಜೇತರು
2. ಎರಡನೇ ಸ್ಥಾನ
3. ಅತ್ಯುತ್ತಮ ವಾದ ಪತ್ರ
4. ಅತ್ಯುತ್ತಮ ಮಹಿಳಾ ನ್ಯಾಯವಾದಿ
5. ಅತ್ಯುತ್ತಮ ಪುರುಷ ನ್ಯಾಯವಾದಿ

ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ

## ರಾಜ್ಯ ಮಟ್ಟದ ಕನ್ನಡ ಕಲ್ಪಿತ ನ್ಯಾಯಾಲಯ ಸ್ಪರ್ಧೆ-೨೦೧೮

## ಸಮಸ್ಯೆ*

**ಗೌರವಾನ್ವಿತ ಕರುನಾಡು ಉಚ್ಚ ನ್ಯಾಯಾಲಯ, ಬೆಂದಕಾಳೂರು**

**ಇವರ ಸಮ್ಮುಖದಲ್ಲಿ**

**ರಿಟ್ಅರ್ಜಿ ಸಂಖ್ಯೆ ೩೦೩/೨೦೧೮**

೧. ಕರುನಾಡು ಖಾಸಗಿ ಶಿಕ್ಷಣ ಸಂಸ್ಥೆಗಳ ಒಕ್ಕೂಟ (ರಿ.)
೨. ಕರುನಾಡು ಪ್ರಾಥಮಿಕ ಶಾಲಾ ಮಕ್ಕಳ ಪೋಷಕರ ಮಹಾಮಂಡಳ(ರಿ.)
೩. ಶಿಕ್ಷಣ ಉಳಿಸಿ ಆಂದೋಲನ ಹಾಗೂ ಇತರರು.

ವಿರುದ್ಧ

೧. ಕರುನಾಡು ರಾಜ್ಯ ಸರಕಾರ, ಬೆಂದಕಾಳೂರು
ಹಾಗೂ ಇತರರು.

ಕರುನಾಡು ರಾಜ್ಯವಿಧಾನ ಸಭೆಗೆ ಪಕ್ಷೇತರಅಭ್ಯರ್ಥಿಯಾಗಿ, ಹಣ, ಜಾತಿ, ತೋಳ್ಬಲ ಇವುಗಳ ಸಾಮರ್ಥ್ಯವಿಲ್ಲದೆಯೂ ಪ್ರಜಾ-ರಾಜ್ಯ, ಸ್ವದೇಶಿ, ಸುಸ್ಥಿರ-ಅಭಿವೃದ್ಧಿ, ಸರ್ವ-ಸಮಾನತೆ, ವಿಶ್ವ-ಭ್ರಾತೃತ್ವ ಮುಂತಾದ ಚಿಂತನೆಗಳಿಂದ ಪ್ರಭಾವಿತನಾದ ರಾಜಕುಮಾರ ದೇಸಾಯಿಯವರು ಪ್ರಭಲ ರಾಜಕೀಯ ಪಕ್ಷಗಳೆರಡೂ ತಮ್ಮ ಅಭ್ಯರ್ಥಿಗಳ ಆಯ್ಕೆಯಲ್ಲಿ ಎಡವಿದ್ದರ ಪರಿಣಾಮ, ಕಿಷ್ಕಿಂದಾ ಮತಕ್ಷೇತ್ರದಿಂದ ಆಶ್ಚರ್ಯಕರ ರೀತಿಯಲ್ಲಿ ಆಯ್ಕೆಯಾಗುತ್ತಾರೆ. ಅತ್ಯಾಶ್ಚರ್ಯ ಎಂದರೆ ರಾಜ್ಯದ ಪ್ರಮುಖ ಪಕ್ಷಗಳೆರಡಕ್ಕೂ ಸಮಬಲದ ಫಲಿತಾಂಶ ಬಂದದ್ದರಿಂದ ಅತಂತ್ರಸ್ಥಿತಿ ನಿರ್ಮಾಣವಾಗಿ, ಆಡಳಿತ ಬೇಕು ಎನ್ನುವವರು ರಾಜಕುಮಾರ ಹೇಳಿದ್ದನ್ನೇ ಕೇಳಬೇಕೆನ್ನುವಂತಾಗಿ, ಕೊನೆಗೆ ಅವರ ಬೆಂಬಲದೊಂದಿಗೆ 'ಭಾರತೀಯ ಸಮತಾ ಪಕ್ಷ' ಕರುನಾಡು ರಾಜ್ಯದಲಿ ಅಧಿಕಾರ ಹಿಡಿಯುತ್ತದೆ. ನಂತರ ರಾಜಕುಮಾರ ಅಣತಿಯಂತೆ ಶಿಕ್ಷಣಖಾತೆ ಅವರಿಗೆ ಲಭ್ಯವಾಗುತ್ತದೆ.

ಮಂತ್ರಿಸ್ಥಾನ ವಹಿಸಿಕೊಂಡ ಕೆಲಸಮಯದಲ್ಲಿಯೇ ನಮ್ಮದೇಶ ಹಿಂದುಳಿದಿರುವಿಕೆಯ ವಿಶ್ಲೇಷಣೆಗೆ ನೇಮಿಸಲಾದ ಕಾನೂನು, ಸಮಾಜಶಾಸ್ತ್ರ, ರಾಜಕೀಯ ತಜ್ಞರು – ಗಣ್ಯರಿಂದೊಡಗೂಡಿದ ರಾಜ್ಯ ಆಯೋಗವು ಸಮಗ್ರ ಅಧ್ಯಯನ ಕೈಗೊಂಡು, ನೀಡಿದ ವರದಿಯು 'ನಮ್ಮ ಇಂದಿನಶಿಕ್ಷಣ ಪದ್ದತಿ'ಯೆ ದೇಶದ ಅವನತಿಗೆ ಕಾರಣ ಎಂದು ಉತ್ತರಿಸುತ್ತದೆ. ಆಯೋಗದ ಪ್ರಕಾರ, ಬಹುತೇಕ ನಾವುಗಳು ಸ್ವಾತಂತ್ರ್ಯಾನಂತರ ಬೇಜವಾಬ್ದಾರಿ ಪ್ರಜೆಗಳಾಗಿ ರೂಪಿತವಾಗುತ್ತಿದ್ದೇವೆ. ಆಯೋಗ ವಿಶ್ಲೇಷಿಸಿದಂತೆ:

> ಇಂದಿನ ಶಿಕ್ಷಣದಿಂದಾಗಿ ನಮ್ಮ ಜನಮಾನಸ ಪಾರಂಪರಿಕ ಸ್ವಾವಲಂಬನೆಯ ಬದುಕಿಗೆ ಪ್ರತಿಯಾಗಿ, ಇತರರ ಮೇಲಿನ ಅವಲಂಬನೆಯ ಮಾನಸಿಕತೆಯನ್ನು ರೂಢಿಸಿಕೊಳ್ಳುವಂತಾಗಿದೆ. ಸತ್ಯ, ಧರ್ಮ, ನೀತಿ, ಮೌಲ್ಯ, ಅರ್ಹತೆಗಳು ಕೆಲಸಕ್ಕೆ ಬಾರದವಾಗಿದ್ದು, ಸುಳ್ಳು, ಮೋಸ, ವಂಚನೆ, ಅನೀತಿ,

---

* ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಹುಬ್ಬಳ್ಳಿ ಆಯೋಜಿಸಿದ ಆರನೇಯ ಕನ್ನಡ ಕಲ್ಪಿತ ನ್ಯಾಯಾಲಯ ಸ್ಪರ್ಧೆ 2013 ಕ್ಕಾಗಿ ಶ್ರೀ. ಬಸವಪ್ರಭು ಹೊಸಕೇರಿ, ನ್ಯಾಯವಾದಿಗಳು, ಧಾರವಾಡ ಇವರು ಈ ಸಮಸ್ಯೆಯನ್ನು ಬರೆದಿರುವರು.

ಯಾವುದಾದರೂ ಸರಿ, ಹಣ ಮಾಡಬಲ್ಲವನೇ ಯಶಸ್ವಿ ಎಂಬಂತಾಗಿದೆ. ಸ್ವಾತಂತ್ರ ಬಂದು ೭೦ ವರ್ಷಗಳ ನಂತರವೂ ವಸಾಹತು ನೀತಿಯ ಶೈಕ್ಷಣಿಕ ವಾತಾವರಣದಿಂದ ಹೊರಬರಲಾಗಿಲ್ಲ. ಬದಲಾಗಿ ಇನ್ನೊಬ್ಬರಿಗೆ ಸೇವೆ ಮಾಡುವ ವರ್ಗದ ನಿರ್ಮಾಣದಲ್ಲಿ ತೊಡಗಿಸಿಕೊಂಡಿದ್ದೇವೆ.
ಅಕ್ಷರ ಕಲಿತ ನಮ್ಮ ಮಕ್ಕಳಿಗೆ ತಮ್ಮ ಮನೆ, ಊರು, ಅಷ್ಟೇ ಏಕೆ? ತಂದೆ-ತಾಯಿಗಳು ಸಹ ಬೇಡವಾಗುತ್ತಿದ್ದಾರೆ. ತನ್ನಗುಡಿಸಲಿನಲ್ಲಿ ಮಾಲಿಕನಾಗಿರುವುದಕ್ಕಿಂತ ಪರರ ಅರಮನೆಯಲ್ಲಿ ಸೇವಕರಾಗಿರುವುದಕ್ಕೆ ನಮ್ಮ ಯುವ ಜನರು ಇಷ್ಟಪಡುತ್ತಿದ್ದಾರೆ. ಹೀಗಾಗಿ ಹಳ್ಳಿಯವ-ಪಟ್ಟಣಕ್ಕೆ, ಪಟ್ಟಣದವ-ನಗರಕ್ಕೆ, ನಂತರ ಶಹರಕೆ, ಕೊನೆಗೆ ವಿದೇಶಕ್ಕೆ ಗುಳೆಹೋಗುವುದು ಇಂದಿನ ಬಹುತೇಕ ಯುವಕರಿಗೆ ಇಷ್ಟವಾಗತೊಡಗಿ, ಹಳ್ಳಿಗಳು ಇಂದು ಒಂದೊ ವೃದ್ಧಾಶ್ರಮಗಳಾಗಿಇಲ್ಲವೇ ಪಾಳು ಬಿದ್ದ ಪಾರಂಪರಿಕ ಸ್ಮಾರಕಗಳಂತಾಗಿವೆ.

ಪ್ರಸಕ್ತ ಶಿಕ್ಷಣದ ಪರಿಣಾಮವಾಗಿ :
ಇಂದು ಅನಕ್ಷರಸ್ತನನ್ನು ಕೆಲಸ ಹುಡಿಕಿಕೊಂಡು ಹೋಗುತ್ತಿದೆ. ಆತ ಹೇಳಿದ್ದೇ ಅಂತಿಮ. ಆದರೆ, ಅಕ್ಷರಸ್ಥನು ಕೆಲಸ ಹುಡುಕಿಕೊಂಡು ಹೋಗುತ್ತಾನೆ. ಕೊಟ್ಟಷ್ಟೇ ಪಡೆದು, ಕೆಲಸ ನಿರ್ವಹಿಸುತ್ತಾನೆ. ಅಕ್ಷರಕಲಿಯದವ ಹಳ್ಳಿಯಲ್ಲೇ ಇದ್ದಾನೆ. ಆತಜೀವನ ನಿರ್ವಹಣೆಗೆ ಇತರರನ್ನು ಆಶ್ರಯಿಸಿಲ್ಲ. ಆತನಿಗೆ ನಿರುದ್ಯೋಗ ಸಮಸ್ಯೆಯೇ ಅಲ್ಲ. ಒಟ್ಟಾರೆ, ಇದು ಶ್ರಮಜೀವನವನ್ನು ತಿರಸ್ಕರಿಸುವ, ಕೀಳಾಗಿ ಕಾಣುವ ದೃಷ್ಟಿಕೋನದ ಮಾನಸಿಕತೆ ರೂಪಿಸುತ್ತಿರುವ ಬ್ರಹತ್ ಗಾತ್ರದ ಶಿಕ್ಷಣ ಸಂಸ್ಥೆಗಳು ದುರ್ಬಲ ಭಾರತದ ನಿರ್ಮಾಣದ ಕಾರ್ಖಾನೆಗಳಂತೆ, ನಮಗೆ ಗೋಚರಿಸತೊಡಗಿವೆ. ಇಂದಿನ ಶಿಕ್ಷಣ ನೌಕರ ವರ್ಗವನ್ನು ಸೃಷ್ಟಿಸುವ ಗುರಿ ಅಂದರೆ ಬಹುತೇಕ ಗುಲಾಮಗಿರಿಯ ಮಾದರಿ. ಹೀಗಾಗಿ ಎಲ್ಲೆಲ್ಲೂ ಗಾಳಿಗೋಪುರಗಳೇ ನಿರ್ಮಾಣವಾಗುತ್ತಿದ್ದು, ನೈಜ ಬದುಕು ಕಣ್ಮರೆಯಾಗುತ್ತಿದೆ. ಇಂದು ಶಿಕ್ಷಣ ಕಲಿಸುವುದು ಬಡವರಿಗೆ ಹೋಗಲಿ, ಮಧ್ಯಮ ವರ್ಗದವರಿಗೂ ಸಾಧ್ಯವಿಲ್ಲ ಎಂಬಂತಾಗಿದೆ. ಬ್ರಿಟೀಷರುತಮ್ಮ ಆಳ್ವಿಕೆ ಪೂರ್ವ ಭಾರತದಲ್ಲಿ ಕೈಗೊಂಡ ಸಮೀಕ್ಷೆಯಂತೆ, ನಮ್ಮ ಶಿಕ್ಷಣ ವ್ಯವಸ್ಥೆಯನ್ನು ಬುಡಮೇಲು ಮಾಡಿದರೆ ಮಾತ್ರ ನಮ್ಮನ್ನು ಸುಲಭವಾಗಿ ಆಳಬಹುದು ಎಂದು ನಿರ್ಧರಿಸಿ ಆ ರೀತಿ ಮಾಡಲಾಯಿತೆಂದು ಹೇಳುತ್ತಿರುವುದು ಈಗ ಸತ್ಯವೆನಿಸತೊಡಗಿದೆ.

ಆಯೋಗದ ವರದಿಯಿಂದ ನಮ್ಮೆಲ್ಲಗಂಭೀರ ಸಮಸ್ಯೆಗಳಿಗೆ ಶಿಕ್ಷಣವೇ ಕಾರಣವೆಂದರಿತ ಶಿಕ್ಷಣ ಸಚಿವರು ನಮ್ಮ ಶಿಕ್ಷಣ ವಿಫಲವಾಗಿದೆ ಎಂದು ಸಾಬಿತಾಗಿಯೂ ಯಾಕೆ ಮುಂದುವರೆಸಬೇಕು? ಎಂಬ ನಿಲುವಿನಿಂದ ತಕ್ಷಣದ ಕ್ರಮವೆಂಬಂತೆ '*ಕರುನಾಡುಸಮಗ್ರ ಶಿಕ್ಷಣ ಮಸೂದೆ ೨೦೧೮*' ನ್ನು ಮಂಡಿಸಿದಾಗ ಬಹುತೇಕ ಸದಸ್ಯರಿಗೆ ಶಿಕ್ಷಣದಲ್ಲಿ ಗುರುತರ ಬದಲಾವಣೆ ತಂದೊಡ್ಡುವ ಈ ಮಸೂದೆ ಒಪ್ಪಿಗೆಯಾಗದಿದ್ದರೂ ಅಧಿಕಾರ ಉಳಿಸಿಕೊಳ್ಳಲು ಶಿಕ್ಷಣ ಸಚಿವರ ಮಾತುಕೇಳಲೇಬೇಕಾದ ಸನ್ನಿವೇಶದಲ್ಲಿ ಸದನದ ಒಪ್ಪಿಗೆ ದೊರೆತಿದ್ದು, ವಿರೋಧಿಗಳು ಸಾಮಾಜಿಕ ಅಶಾಂತಿ ಉಂಟಾಗಲಿ ಎಂಬ ದುರುದ್ದೇಶದಿಂದಲೇ ಇದನ್ನು ಸಮರ್ಥಿಸಿದ್ದಾರೆ.

ತದ-ನಂತರ ಸರಕಾರದ ಅಣತಿಯಂತೆ ಕಾಯ್ದೆ ಅಧಿಸೂಚನೆಗೊಂಡು, ೨೦೧೯-೨೦ನೇ ಸಾಲಿನಿಂದ ಕರುನಾಡು ರಾಜ್ಯಕ್ಕೆ ಹೊಸ ಶಿಕ್ಷಣ ನೀತಿ ಸಿದ್ಧಗೊಂಡಿದೆ. ಅದರನ್ವಯ;

೦೧. ಮಗುವಿನ ಮಾನಸಿಕ ಸಾಮರ್ಥ್ಯ ಹಸ್ತಕ್ಷೇಪವಿಲ್ಲದೇ ಬೆಳವಣಿಗೆ ಹೊಂದಲು, ಮಗುವನ್ನು ಶಾಲೆಗೆ ಸೇರಿಸಲು ೬ ವರ್ಷಕಡ್ಡಾಯ. ತತ್ಪರಿಣಾಮ ೬ ವರ್ಷಗಳಿಗೂ ಮುಂಚಿನ ಸಂಪ್ರದಾಯಿಕ ಶಿಕ್ಷಣ ನಿಷಿದ್ಧ. ಹೀಗಾಗಿ ರಾಜ್ಯದಲ್ಲಿ ಅಸ್ತಿತ್ವದಲ್ಲಿರುವ ಎಲ್ಲ ನರ್ಸರಿ, ಮೊಂಟೆಸರಿ, ಕಿಂಡರ್‌ಗಾರ್ಟನ್,

ಪೂರ್ವಪ್ರಾಥಮಿಕ ಎಂತೆಲ್ಲಾ ಕರೆಯುವ ಎಲ್ಲಾ ಶಿಕ್ಷಣ ಸಂಸ್ಥೆಗಳು ತಕ್ಷಣದಿಂದ ತಮ್ಮ ಮಾನ್ಯತೆಯನ್ನು ಕಳೆದುಕೊಳ್ಳುತ್ತವೆ.

೦೨. ಜಾಗತಿಕ ಶಿಕ್ಷಣ ತಜ್ಞರ ಅಭಿಮತದಂತೆ, ಮಗುವು ಮಾಧ್ಯಮಿಕ ಹಂತದವರೆಗೆ ಮಾತೃಭಾಷೆಯಲ್ಲಿಯೇ ಅಧ್ಯಯನ ಮಾಡುವುದು ಕಡ್ಡಾಯ.

೦೩. ಪ್ರಾಥಮಿಕ, ಮಾಧ್ಯಮಿಕ, ಪ್ರೌಢ ಹಂತಗಳಲ್ಲಿ ಎಲ್ಲ ವಿದ್ಯಾರ್ಥಿಗಳಿಗೆ ಜೀವನ ಶಿಕ್ಷಣ ಅಂದರೆ-ಕೃಷಿ, ಕ್ರೀಡೆ, ಚಿತ್ರಕಲೆ, ಸಂಗೀತ, ನಾಟಕ, ಕರ-ಕುಶಲ ಕೈಗಾರಿಕೆ, ನೈತಿಕ ಶಿಕ್ಷಣ ಕಡ್ಡಾಯ.

೦೪. ತದನಂತರದ ಕಲೆ, ವಾಣಿಜ್ಯ, ವಿಜ್ಞಾನ, ಕೃಷಿ ಮುಂತಾಗಿ ಆಸಕ್ತ ಕ್ಷೇತ್ರದಲ್ಲಿ ಅಧ್ಯಯನಕ್ಕೆ ಅವಕಾಶ.

೦೫. ಸ್ಮರಣಶಕ್ತಿ ಆಧರಿಸಿ ಪರೀಕ್ಷೆ ನಡೆಸುವುದು ನಿಷಿದ್ಧ. ಬದಲಾಗಿ ಎಲ್ಲವೂ ಪ್ರಾಯೋಗಿಕವಾಗಿ ಪರೀಕ್ಷೆ ನಡೆಸುವುದು.

೦೬. ಸಾರ್ವಜನಿಕ ಶಿಕ್ಷಣವು ಎಲ್ಲಾ ಹಂತಗಳಲ್ಲಿ ಉಚಿತವಾಗಿರುತ್ತದೆ.

ಪರಿಣಾಮ ರಾಜ್ಯಾದ್ಯಂತ ಖಾಸಗಿ ಶಾಲೆಗಳು, ಪಾಲಕರು, ಇವರುಗಳಿಂದ ಪ್ರೇರಿತ ವಿದ್ಯಾರ್ಥಿಗಳು ಪ್ರತಿಭಟನೆ ದೊಂಬಿಗಿಳಿಯುತ್ತಾರೆ. ಅಷ್ಟಾಗಿಯೂ ಸರಕಾರ ಮನವಿ, ಮಾತುಕತೆಗೆ ಸೊಪ್ಪುಹಾಕದಿದ್ದಾಗ ಅನಿವಾರ್ಯವಾಗಿ ಅರ್ಜಿದಾರರು ನ್ಯಾಯಾಂಗದ ಮೊರೆ ಹೋಗಿದ್ದಾರೆ.

ಅರ್ಜಿದಾರರು ರಿಟ್ ಸಲ್ಲಿಸಿ, ಭಾರತ ಒಕ್ಕೂಟದ ಇತರ ರಾಜ್ಯಗಳಲ್ಲಿ ಇರುವ ಶಿಕ್ಷಣ ವ್ಯವಸ್ಥೆಗೆ ವ್ಯತಿರಿಕ್ತವಾಗಿ ಕರುನಾಡು ರಾಜ್ಯದಲಿ ್ಲಜಾರಿಮಾಡಬೇಕೆಂದಿರುವ ಹೊಸ ಶಿಕ್ಷಣ ನೀತಿಯು ಪ್ರಜೆಗಳ, ಶಿಕ್ಷಣ ಸಂಸ್ಥೆಗಳ, ವಿದ್ಯಾರ್ಥಿಗಳ ಮೇಲೆ ಕಾನೂನಾತ್ಮಕ ಒತ್ತಾಯದ ಹೇರಿಕೆಯಾಗಿದ್ದು, ಅವರ ವ್ಯಕ್ತಿ/ಸಾಂಸ್ಥಿಕ ಸ್ವಾತಂತ್ರದ ಸ್ಪಷ್ಟ ಉಲ್ಲಂಘನೆ, ಜಾಗತಿಕ ದೃಷ್ಟಿಕೊನದಲಿ ್ಲಇದು ಹಿಮ್ಮುಖ ನಡಿಗೆ ಯಾಗಿದೆ ಎಂಬಿವೇ ಮುಂತಾದ ಅಹವಾಲುಗಳೊಂದಿಗೆ *ಕರುನಾಡು ಶಿಕ್ಷಣ ಕಾಯಿದೆ, ೨೦೧೮* ಮತ್ತು ಅದರಡಿ ರೂಪಿಸಿದ ನಿಯಮಗಳ ಸಿಂಧುತ್ವವನ್ನು ಪ್ರಶ್ನಿಸಲಾಗಿದೆ. ಈ ವಾದಕ್ಕೆ ಪ್ರತಿಯಾಗಿ ಸರಕಾರ ನಮ್ಮ ಸಂವಿಧಾನವು ಶಿಕ್ಷಣ ಇದೇ ಮಾದರಿಯದು ಇರಬೇಕು ಎಂದೇನು ಹೇಳುವುದಿಲ್ಲ. ಹೀಗಾಗಿ ಈಗಿರುವ ಶಿಕ್ಷಣ ಸಂವಿಧಾನಕ್ಕೆ ಪೂರಕವಾಗಿದೆ ಎಂದೇನು ಅಲ್ಲ. ಜೊತೆಗೆ ಶಿಕ್ಷಣ ನೀತಿಯು ರಾಜ್ಯ ಸರಕಾರದ ಪರಮಾಧಿಕಾರ ಎಂದು ವಿರೋಧಿಸುತ್ತಿದೆ.

ಅರ್ಜಿಯು ಅಂತಿಮ ವಿಚಾರಣಾ ಹಂತದಲ್ಲಿದ್ದು, ಮೊಕದ್ದಮೆಯಲ್ಲಿ ಸಾರ್ವಜನಿಕ ಹಿತಾಸಕ್ತಿ ಅಡಗಿದೆಯೇ? ನ್ಯಾಯಾಲಯವು, ಅರ್ಜಿದಾರರ ಕೋರಿಕೆಯನ್ನು ಮಾನ್ಯ ಮಾಡಬಹುದೇ? ಮುಂತಾದ ವಿವಾದಾಂಶಗಳ ಜೊತೆ ಪ್ರಸ್ತಾಪಿತ ವಿಷಯಗಳ ಕುರಿತಾಗಿಯೂ ವಾದ ಮಂಡನೆಯಾಗಬೇಕಿದೆ.

# ನೋಂದಣಿ ಪತ್ರ

## ಆರನೇಯ ಕನ್ನಡ ಕಲ್ಪಿತ ನ್ಯಾಯಾಲಯ ಸ್ಪರ್ಧೆ 23 ಮತ್ತು 24 ನವೆಂಬರ್ 2018

### ಹೆಸರು ಮತ್ತು ವಿಳಾಸ/ವಿದ್ಯಾ ಸಂಸ್ಥೆಯ ಹೆಸರು ಹಾಗೂ ಇ-ಮೇಲ್ ಮತ್ತು ದೂರವಾಣಿ ಸಂಖ್ಯೆ

1. ವಾದ ಮಂಡಿಸುವ ವಿದ್ಯಾರ್ಥಿಯ ಹೆಸರು :
   ತರಗತಿ
   ವಿಳಾಸ : ______________________
   ______________________
   ______________________
   ದೂರವಾಣಿ ಸಂಖ್ಯೆ :
   ಇ-ಮೇಲ್ :

   ಭಾವಚಿತ್ರ

2. ವಾದ ಮಂಡಿಸುವ ವಿದ್ಯಾರ್ಥಿಯ ಹೆಸರು :
   ತರಗತಿ
   ವಿಳಾಸ : ______________________
   ______________________
   ______________________
   ದೂರವಾಣಿ ಸಂಖ್ಯೆ :
   ಇ-ಮೇಲ್ :

   ಭಾವಚಿತ್ರ

3. ಸಂಶೋಧನಾ ವಿದ್ಯಾರ್ಥಿಯ ಹೆಸರು :
   ತರಗತಿ
   ವಿಳಾಸ : ______________________
   ______________________
   ______________________
   ದೂರವಾಣಿ ಸಂಖ್ಯೆ :
   ಇ-ಮೇಲ್ :

   ಭಾವಚಿತ್ರ

**ಮಹಾವಿದ್ಯಾಲಯದ ಮುಖ್ಯಸ್ಥರ ಹೆಸರು ಹಾಗೂ ಮೊಹರು**

* ಭಾವಚಿತ್ರಗಳನ್ನು ಮಹಾವಿದ್ಯಾಲಯದ ಪ್ರಾಚಾರ್ಯರು ದೃಢೀಕರಿಸಬೇಕು